11	ಯಾದಗಿರ್	ಗುಲ್ಬರ್ಗಾ	15
12	ಗುಲ್ಬರ್ಗಾ (ಎರ್ ಪೋರ್ಟ್ ಲ್ಯಾಂಡ್) ಗುಲ್ಬರ್ಗಾ	ಗುಲ್ಬರ್ಗಾ	750
13	ನಲತ್ ವಾಡ	ಬಿಜಾಪುರ	10
14	ಲಕ್ಕಮ್ಮನಹಳ್ಳಿ	ಧಾರವಾಡ	50
15	-		
16	ಇಟ್ಟಂಗಿಹಾಳ್, ಬಿಜಾಪುರ್	ಬಿಜಾಪುರ್	75
17	ಬಸವನ ಬಾಗೇವಾಡಿ	ಬಿಜಾಪುರ್	50
18	ಸಿಂದಗಿ	ಬಿಜಾಪುರ್	12
19	ಚಿಕ್ಕೋಡಿ	ಬೆಳಗಾಂ	5
20	ಗೋಕಾಕ್	ಬೆಳಗಾಂ	40
21	ಹಿಂಡಲಗ	ಬೆಳಗಾಂ	30
22	ಸೌಂದತ್ತಿ	ಬೆಳಗಾಂ	10
23	ಚನ್ನಪಟ್ಟಣ	ಬೆಂಗಳೂರು–ತುಮಕೂರು	30
24	ಹಗರಿಬೊಮ್ಮನಹಳ್ಳಿ	ಬಳ್ಳಾರಿ	15
25	ಗಂಗಾವತಿ	ಬಳ್ಳಾರಿ	50
		ಒಟ್ಟು	**2092**

564(937) ಶ್ರೀ ಯಾದವಾಡ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ)ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಗೃಹ ಮಂಡಳಿಯಿಂದ ರಾಮದುರ್ಗ ತಾಲ್ಲೂಕಿನಲ್ಲಿ ಮನೆಗಳ ನಿರ್ಮಾಣಕ್ಕಾಗಿ ಜಮೀನು ಖರೀದಿಸುವಾಗ ದರ ನಿಗದಿಪಡಿಸುವಲ್ಲಿ ಅವ್ಯವಹಾರ ಮತ್ತು ಅಕ್ರಮ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಸಾಮಾನ್ಯವಾಗಿ ಕಟಕೋಳ ಹೋಬಳಿ ಕಂಕಣವಾಡಿ ಸುತ್ತಮುತ್ತಲು ಜಮೀನು ಖರೀದಿಸಲು ನಿಗದಿಪಡಿಸಿದ ಮಾರುಕಟ್ಟೆ ಬೆಲೆ ಎಷ್ಟು? ಅಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಖರೀದಿಸಿದ ಜಮೀನು ಸಾಮಾನ್ಯ ನಿಗದಿತ ಮಾರುಕಟ್ಟೆ ಬೆಲೆಗಿಂತ ಎಷ್ಟು ಪಟ್ಟು ಹೆಚ್ಚಾಗಿದೆ? ವಿವರ ನೀಡುವುದು

ಇ) ಕರ್ನಾಟಕ ಗೃಹ ಮಂಡಳಿಯವರು ಖರೀದಿಸಿದ ಜಮೀನು ಕಪ್ಪು ಮಣ್ಣಿನಿಂದ ಕೂಡಿದ್ದು, ಇಲ್ಲಿ ಸವಳು–ಜವಳು, ಉಂಟಾಗುತ್ತದೆ ಮತ್ತು ಮಲಪ್ರಭಾ

ನದಿ ನೆರೆ ಹಾವಳಿ ಬಂದಾಗ ಈ ಜಮೀನಿನಲ್ಲಿ ಪ್ರವಾಹವು ಉಂಟಾಗುವುದು ಹೀಗಿದ್ದು ಇಲ್ಲಿಯ ಮನೆಗಳನ್ನು ನಿರ್ಮಿಸುವ ಕ್ರಮ ಸರಿಯೆ (ವಿವರ ನೀಡುವುದು)?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ರಾಮದುರ್ಗ ತಾಲ್ಲೂಕಿನಲ್ಲಿ ಮನೆಗಳ ನಿರ್ಮಾಣಕ್ಕಾಗಿ ಜಮೀನಿನ ದರವನ್ನು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಭೂ ಖರೀದಿ ಸಮಿತಿಯಲ್ಲಿ ಜಮೀನಿನ ಮಾಲೀಕರೊಡನೆ ಸಂಧಾನ ಮಾಡಿ ಬೆಲೆ ನಿಗಧಿಪಡಿಸಿದ ನಂತರ, ಕರ್ನಾಟಕ ಗೃಹ ಮಂಡಳಿಯ ಸಭೆಯನ್ನು ಸದರಿ ಬೆಲೆಯನ್ನು ಅಂಗೀಕರಿಸಿದ ನಂತರ ಸದರಿ ಜಮೀನಿನ ಬೆಲೆಯನ್ನು ಸರ್ಕಾರದಿಂದ ಅನುಮೋದಿಸಲಾಗಿದೆ ಆದುದರಿಂದ ಇಲ್ಲಿ ಯಾವ ಅವ್ಯವಹಾರ ಹಾಗೂ ಅಕ್ರಮ ನಡೆದಿರುವುದಿಲ್ಲ

ಆ) ರಾಮದುರ್ಗ ಪಟ್ಟಣದ ಕಂಕಣವಾಡಿ ಗ್ರಾಮದ ಸುತ್ತಮುತ್ತಲಿನ ಜಮೀನಿನ ಮಾರುಕಟ್ಟೆ ಬೆಲೆ ಸರ್ಕಾರದಿಂದ 2001–2002 ರಲ್ಲಿ ನಿಗದಿಯಾಗಿರುತ್ತದೆ 2005–2006 ರಲ್ಲಿ ಬೆಲೆ ನಿಗದಿಯಾಗಿರುವುದಿಲ್ಲ ಆದರೆ ಅಲ್ಲಿಯ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಜಮೀನಿನ ಬೆಲೆ ಪ್ರತಿ ಎಕರೆಗೆ ರೂ 3 00 ಲಕ್ಷ ಹಾಗೂ ಒಳಪಟ್ಟು ಜಮೀನುಗಳಿಗೆ ಪ್ರತಿ ಎಕರೆಗೆ ರೂ 2 50 ದಿಂದ ರೂ 1 50 ಲಕ್ಷ ಇರುತ್ತದೆ ಕರ್ನಾಟಕ ಗೃಹ ಮಂಡಳಿಯಿಂದ ಖರೀದಿಸಿದ ಜಮೀನಿನ ಬೆಲೆ ಎಕರೆ 1ಕ್ಕೆ 2 80 ಲಕ್ಷಗಳಾಗಿದ್ದು ಜಮೀನು ಜಿಲ್ಲೆಯ ಮುಖ್ಯ ರಸ್ತೆಗೆ ಹೊಂದಿ ಕೊಂಡಿರುವುದರಿಂದ ಮಾರುಕಟ್ಟೆ ಬೆಲೆಗೆ ಸಮಾನಾಂತರವಾಗಿರುತ್ತದೆ

ಇ)ಕರ್ನಾಟಕ ಗೃಹ ಮಂಡಳಿಯಿಂದ ಖರೀದಿಸಿದ ಜಮೀನು ಕಪ್ಪು ಮಣ್ಣಿನಿಂದ ಕೂಡಿದ್ದು, ಹಾಗೂ ನೆರೆ ಹಾವಳಿಗೆ ಒಳಪಡುವ ಜಮೀನನ್ನು ಹೊರತುಪಡಿಸಿ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಜಮೀನನ್ನು ಮಾತ್ರ ಖರೀದಿಸಲಾಗಿದೆ ಸದರಿ ಮಣ್ಣಿನ ಮಾದರಿಯನ್ನು ಪರೀಕ್ಷಿಸಲಾಗಿ ಸೂಕ್ತ ತಾಂತ್ರಿಕ ಸಹಾಯದೊಂದಿಗೆ ವಸತಿ ಯೋಜನೆಯನ್ನು ರೂಪಿಸಬಹುದಾಗಿದೆ

565(938) ಶ್ರೀ ಯಾದವಾಡ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ) ಮಾನ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಹುಲುಕುಂದ ಏತ ನೀರಾವರಿ ಯೋಜನೆಯ ಕಾಮಗಾರಿ ಮಂದಗತಿಯ ಸರ್ಕಾರದ ಗಮನಕ್ಕೆ ಬಂದಿದೆಯೇ?